‘ನಮ್ಮಾಕೆ ಸಾವಿ ಇದ್ಯ? ದುಡಿಯೋದೆ ನಮ್ ಕರ್ಮ’ ಅನ್ನುವಳು.

‘ನಿಮ್ ಕರ್ಮದಿಂದ್ಲೇ ಆ ಹುಡ್ಗ ಹಾಳಾಗೋಗ್ತಾನೆ’ ಎಂದು ಕನಿಕರಿಸುವರು.

ಆ ಹೆಂಗಸು ಅದನ್ನ ಕೂಗಿ ಕರೆಯುವಳು. ಅದು ತಲೆ ಕೆರೆದುಕೊಂಡು ಮಾಸ್ತರನ್ನೇ ನೋಡುತ್ತಾ ಹೊರ ಬಂತು. ಮಾಸ್ತರು ಮಾತ್ರ ಮೂಕವೇದನೆಯನ್ನ ಅನುಭವಿಸುವರು– ‘ಅದನ್ನೇ ದಿಟ್ಟಿಸಿ ನೋಡುವರು. ಭರವಸೆ ಮೂಡಿಸುವ ಒಬ್ಬನಾದರೂ ಇದ್ದಾನೆಂದರೆ ಅದು ‘ಅದು’ ಮಾತ್ರ ಆಗಿತ್ತು. ಈ ಸ್ಕೂಲಿಗೆ ‘ಅದು’ ಸೇರಿದ್ದರೆ. ಹೆಸರು ಮಾಡುವ ಹುಡುಗನೆಂದು ಎಣಿಸಿದ್ದೆ. ಈಗ ಅದಕ್ಕೆ ಕುತ್ತುಬಿತ್ತು. ‘ಅದು’ ಅದರ ಹಿಂದೆಯೇ ಮರಳಿನಲ್ಲಿ ಮನೆ ಮಾಡಿ, ನೀರಿನ ಸೆಳೆತಕ್ಕೆ ಮನೆ ನೀರಿನಲ್ಲಿ ಸಮಾಧಿಯಾದದ್ದು ಭಾಸವಾಗಿ ಮಾಸ್ತರಿಗೆ, ಅವರಿಗರಿವಿಲ್ಲದೆ ಕಣ್ಣು ತೇವಗೊಂಡಿತು. ‘ಅದ’ಕ್ಕೆ ಅದು ಮಿಂಚಿನಂತೆ ಗೋಚರಿಸಿ, ಮಿಂಚಿನ ನಗೆ ಬೀರಿದ್ದು ಯಾರ ಗಮನಕ್ಕೂ ಬರಲಿಲ್ಲ.

ಅದು ಸ್ಕೂಲಿಗೆ ಹೋಗಿದ್ದು, ಕಲ್ಲುಗಣಿಯಲ್ಲಿ ಕೆಲಸ ಮಾಡುವವರಿಗೆಲ್ಲಾ ಗೊತ್ತಾಗಿ ‘ಅದ’ಕ್ಕೆ ಸ್ಕೂಲ್ಗೆ ಹೋಗಿ ಕಲಿಯೋಕೆ ಹುಚ್ಚಿದೆ! ಕಳ್ಸಿ ಕೆಂಚಾ’ ಅಂತಾ ಎಲ್ಲರೂ ವರಾತ ಮಾಡುವವರೇ. ಅಷ್ಟರಲಿ ತಮ್ಮಯ್ಯ ಬಂದಾಗ ಅವರಿಗೆ ಹೀಗೆ... ಹೀಗೆಂತಾ ‘ಅದ’ರ ಬಗ್ಗೆ ಹೇಳಿದರು.

ತಮ್ಮಯ್ಯ ಕನಿಕರಿಸಿದ. ‘ಯಾವ ಹುತ್ತದಲ್ಲಿ ಯಾವ ಹಾವು ಇರುತ್ತೆ ಯಾರಿಗೆ ಗೊತ್ತು. ಯಾರ ಹಣೆ ಬರಹದಲ್ಲಿ ಏನೇನು ಇರುತ್ತೆ? ಅಂತ ಆ ಬ್ರಹ್ಮನಿಗೇ ಗೊತ್ತು. ಬ್ರಹ್ಮ ಬರಹ ಬರದೋನ ಕೈಲಿ ಅಳಿಸಲಿಕ್ಕೂ ಅವನಿಂದಲೂ ಸಾಧ್ಯವಿಲ್ಲ ಅಂತಾ’ ಆಗಾಗ ನಮ್ಮಪ್ಪ ಹೇಳುತ್ತಿದ್ದು ಜ್ಞಾಪಕಕ್ಕೆ ಬಂತು. ಆಗ ಸ್ವಲ್ಪ ಹೊತ್ತು ಯೋಚನೆಯ ಮಡುವಿನಲ್ಲಿ ಬಿದ್ದ. ಏನೋ ಗ್ನ್ಯಾಪಿಸಿ ಕೊಂಡವನಂತೆ, ದಿಢೀರನೆ ಮಿಂಚಂತೆ ತಲೆಯಲ್ಲಿ ಹೊಳೆದು ಸಂತಸದ ನಗೆ ಬೀರಿದನು. ‘ನನ್ಗೆ ಗೊತ್ತಿರುವರೊಬ್ಬರು ಸ್ಕೂಲ್ ನಡ್ಸಿತ್ತಿದ್ದಾರೆ. ‘ಅದ’ನ್ನ ಅಲ್ಲಿಗೆ ಸೇರ್ಸಿದ್ರೆ, ಇವರ್ಯಾರಿಗೂ ದುಗ್ಗಾಣಿ ಖರ್ಚು ಬರೋಕಿಲ್ಲ. ಅವ್ರೆ ಓದುಸ್ತಾರೆ. ಅಲ್ಲಿಗೆ ಬಿಟ್ರೆ ಚೆನ್ನಾಗಿ ಓದ್ಲೂಬಹುದು’ ಎಂದು ಹೇಳಿದಾಗ ಅಲ್ಲಿದ್ದವರೆಲ್ಲಾ ‘ಅಂಗೇ ಮಾಡಿ ತಮ್ಮಣ್ಣ. ನಾವಂತೂ ಓದ್ಲಿಲ್ಲ. ಆ ಹುಡ್ಗನಾದ್ರೂ ಓದ್ಲಿ’ ಅಂತ ಹೇಳಿದರು. ಕೆಂಚ ಮತ್ತು ಅವನ ಹೆಂಡತಿ ಮಾತ್ರ ಓತೀಕ್ಯಾತನ ರೀತಿ ‘ಮುಗುಂ’ ಆಗಿ ಇದ್ದರು. ‘ಅದನ್ನ ಓದೋಕೆ ಕಳ್ಸಿದ್ರೆ. ಅದ್ರ ದುಡ್ಮೆ ಯಾರ್ ಮಾಡ್ತಾರೆ’ ಅನ್ನೋದೆ ಅವ್ರ ಚಿಂತೆ.

‘ಯೇ ಸುಮ್ಕೆ ಹ್ಞೂಂ ಅನ್ನು ಎಲ್ಲದಕ್ಕೂ ತಮ್ಮಣ್ಣ ದಾರಿ ತೋರ್ಸ್ತಾರೆ. ಅವ್ನಾದ್ರೂ ಓದ್ಲಿ’ ಅಂದಾಗ ವಿಧಿಯಿಲ್ಲದೆ ಬರೀ ತಲೆ ಅಲ್ಲಾಡಿಸಿದನು.

‘ಅದು’ ಗಣಿಯಲ್ಲಿ ಆಗಾಗ ಕೆಲಸ ಮಾಡುತ್ತಿತ್ತು. ಅಕ್ಷರದ ಮೇಲೆ ಪ್ರೀತಿ ಇರುವುದನ್ನ ಮೊದಲೇ ಗುರುತಿಸಿದ್ದ ತಮ್ಮಯ್ಯ. ಅವನಿಗೆ ಗೊತ್ತಿದ್ದ ದೇಶ ಬಂಧು ಶಿಕ್ಷಣ ಸಂಸ್ಥೆಯ ಬಾಲ ಕಾರ್ಮಿಕರ ಹಗಲು ಶಾಲೆಗೆ 3ನೇ ತರಗತಿಗೆ ಸೇರಿಸಿದನು. ‘ಅದು’ ಓದಿನಲ್ಲಿ ಚುರುಕಾಗಿದ್ದು ಶ್ರದ್ಧೆ ಮತ್ತು ಕಲಿಕೆಯಲ್ಲೂ ಆಸಕ್ತಿಯನ್ನು ತೋರಿ ಉತ್ಸುಕತೆಯಿಂದ ಅಂದಂದಿನ ಪಾಠವನ್ನು ಒಪ್ಪಿಸಿ ಮುಂದೆ ಓದಲು ಆತುರ ತೋರುತ್ತಿದ್ದನ್ನು ಕಂಡು 6 ತಿಂಗಳ ನಂತರ ಅದರ ವಯಸ್ಸಿನನುಗುಣವಾಗಿ ನೇರವಾಗಿ 4ನೇ ತರಗತಿಗೆ ಸೇರಿಸಿದರು.

‘ಅದು’ ಏಳನೇ ತರಗತಿಯಲ್ಲಿ ಎಲ್ಲರಿಗಿಂತಲೂ ಹೆಚ್ಚಿಗೆ ಮಾರ್ಕ್ಸ್ ತೆಗೆದುಕೊಂಡು ಪಾಸಾಗಿತ್ತು. ಎಲ್ಲರ ಬಾಯಲ್ಲೂ ಅದರದೇ ಮಾತು ಕತೆ. ‘ಅದು’ ಇಂತಿಂತದ್ದೇ ಓದುತ್ತೆ. ಇಂತಿಂತ ಕೆಲ್ಸಕ್ಕೆ ಸೇರುತ್ತೆ. ಮುಂದೆ ಅದಾಗುತ್ತೆ, ಇದಾಗುತ್ತೆ ಎಂದು ಅವರಿವರಿಗೆ ಅನಿಸಿದ್ದನ್ನು ಹೇಳುತ್ತಿದ್ದರು. ಅದು ಕೂಡ ಅಂತ ಮಾತಿಗೂ ಆಹಾರವಾಗಿ ಚಲಾವಣೆಯ ಮುಂಚೂಣೆಗೆ ಬಂದು ನಿಲ್ಲುತ್ತಿತ್ತು. ಆದರೆ ಅದಕೆ ಇದ್ಯಾವುದರ ಪರಿವೇ ಇಲ್ಲದೆ ಅಕ್ಷರ ಹಸಿವನ್ನು ನೀಗಿಸಿಕೊಳ್ಳಲು, ಮೂಕನಂತೆ, ಪ್ರಕಾಶಮಾನವಾದ ಕಣ್ಣುಳ್ಳ ಪ್ರಕರತೆಯ ಅಂಚಿನ, ಚುರುಕು ಬುದ್ಧಿ ಮನಸ್ಸನ್ನು ಸದಾ ತೆರೆದುಕೊಂಡು ಆವಾಹಿಸಿಕೊಳ್ಳುತ್ತಿದ್ದನು.

ಹೈಸ್ಕೂಲಿಗೆ ಬರುತ್ತಿದ್ದಂತೆ, ಮುಂದೆ ‘ಅದ’ಕೆ ಇಂಗ್ಲಿಷ್ ಕಲಿಯುವ ಮೋಹ ಹೆಚ್ಚಾಯಿತು. ಇಂಗ್ಲಿಷ್ ಕಲಿಯಲು ಪ್ರತ್ಯೇಕ ಟ್ಯೂಷನ್‌ಗೆ ಹೋಗ ಬೇಕಾಗಿದ್ದಿತು. ಅಲ್ಲಿ ಇಂಗ್ಲಿಷ್ ಕಲಿಯಲು ಹಣ ಕೊಡಬೇಕಾಗಿತ್ತು. ಹಣದ ಮುಖವನ್ನೇ ನೋಡದ ‘ಅದ’ಕೆ ಹಣ ಎಲ್ಲಿಂದ ಬರಬೇಕು. ಹಣವಿಲ್ಲದೆ ಇಂಗ್ಲಿಷ್ ಜ್ಞಾನ ಸಂಪಾದಿಸಿಕೊಳ್ಳಲು ಆಗುತ್ತಿಲ್ಲ. ಈಗ ‘ಅದ’ಕೆ ಸಂಕಟ ಪ್ರಾಪ್ತವಾಗಿತು. ದಿಕ್ಕೇ ತೋಚುತ್ತಿಲ್ಲ. ದುಡ್ಡು ದುಡಿಯಬೇಕು. ಇಂಗ್ಲಿಷ್ ಕಲಿಯಬೇಕು. ಇಂಗ್ಲಿಷ್ ಕಲಿಕೆಯ ಮೋಹ ದಿನ ದಿನವೇ ಹೆಚ್ಚಾಯಿತು.

ಕೊನೆಗೆ, ಒಂದು ದಿನ ನಿರ್ಧಾರಕ್ಕೆ ಬಂದನು. ಬೆಳಗಿನ ಜಾವ ಪೇಪರನ್ನು ಮನೆ ಮನೆಗೆ ಹಾಕಿ, ಒಂದಿಷ್ಟು ಹಣ ಗಳಿಸಬಹುದು ಎನ್ನುವುದನ್ನು ಅರಿತ. ಅದನ್ನು ಕೊಟ್ಟು ಇಂಗ್ಲಿಷ್ ಕಲಿಯಬಹುದು ಎಂಬ ಹಣಕ್ಕೆ ಬಿದ್ದನು. ಆಗ ಪೇಪರನ್ನ ಮನೆ ಮನೆಗೆ ಹಾಕಿ ಹಣ ಗಳಿಸಿದ. ಸ್ಪೋಕನ್ ಇಂಗ್ಲಿಷ್ ಕ್ಲಾಸಿಗೆ ಸೇರಿಕೊಂಡಿತು. ಅದು ಕಲಿಕೆಯನ್ನು ಮುತುವರ್ಜಿ ವಹಿಸಿ ಕಲಿಯಲು ಪ್ರಾರಂಭಿಸಿತು. ಕಲಿಯುವುದಕ್ಕಾಗಿಯೇ ಪಡುವ ಪಡುಪಾಟಲನ್ನು ಅರಿತ ಮಾಸ್ತರು ಅವನಿಂದ ಮುಂದೆ ಬಿಡಿಕಾಸನ್ನು ತೆಗೆದುಕೊಳ್ಳದೆ ಉಚಿತವಾಗಿ ಇಂಗ್ಲಿಷ್ ಕಲಿಸುತ್ತಿದ್ದರು. ಈಗ ‘ಅದ’ಕೆ ಇಂಗ್ಲಿಷ್‌ನಲ್ಲಿ ಮಾತನಾಡಲು ಮುಂದಾಗಿತು. ಮೊದ ಮೊದಲು **I go, water drink,** ಅಂತಲೂ ಮಾತನಾಡಲು ಶುರು ಮಾಡಿ, ಮುಂದೆ ಶುದ್ಧ ವ್ಯಾಕರಣ ಬದ್ಧವಾಗಿ ಮಾತನಾಡಲು ಶಕ್ತನಾಗುವ ಮಟ್ಟಕ್ಕೆ ಬರುವಂತೆನಾದನು, ಕನ್ನಡದಷ್ಟೇ ಸುಸಲಿತವಾಗಿ ಇಂಗ್ಲಿಷ್‌ನ್ನು ಕಲಿತ. ಇಂಗ್ಲಿಷ್ ಜೊತೆಗೆ ಇನ್ನಿತರ ಪಾಠ ಪ್ರವಚನವನ್ನು ಅಷ್ಟೇ ಶ್ರದ್ಧೆಯಿಂದ, ಕಲಿಯಲು ಮುಂದಾದ. ಗಣಿತದಲ್ಲಂತೂ ಎತ್ತಿದ ಕೈ. ತಪ್ಪಿಲ್ಲದೆ ಗುಣಿಸುವುದು, ಭಾಗಿಸುವುದು, ಕೂಡಿಸುವುದು ಅಂದರೆ ಕಣ್ ಮಿಟಕಿಸುವುದರೊಳಗೆ ಮಾಡಿ ಮುಗಿಸುವ ಛಾತಿಗೆ ಸೇರಿದವನಾಗಿದ್ದ. ಪ್ರತಿ ಸಾರಿಯೂ ಗಣಿತದಲ್ಲಿ ನೂರಕ್ಕೆ ನೂರು ಬರುತ್ತಿತ್ತು. ಉಳಿದವುಗಳಲ್ಲಿ ನೂರಕ್ಕೆ ಒಂದೆರಡು ಮಾರ್ಕ್ಸ್ ಕಡಿಮೆ ಅಷ್ಟೇ. ಸ್ಕೂಲಿನಲ್ಲಿ ‘ಅದು’ ಅಂದರೆ ಎಲ್ಲರಿಗೂ ಬೆಲ್ಲ ಸಿಕ್ಕಾಗೆ. ಎಲ್ಲರಿಗೂ ಚಪ್ಪರಿಸುವ ಗುಣ, ಮುದ್ದಾಡುವ ಗುಣ, ನೋಡಿ ಸೆಳೆಯುವ ಮನ. ಯಾವಾಗಲೂ ಅದರದೇ ಮಾತುಕತೆ ಅದರದೇ ಬಣ್ಣನೆ ಅಂಗಾಯ್ತು.

*   *   *

ಅದು ಹೈಸ್ಕೂಲ್ ದಾಟಿ ಪಟ್ಟಣದ ಕಾಲೇಜಿಗೆ ಸೇರಬೇಕಿತ್ತು. ಈಗ ಅದಕೆ ಎಲ್ಲಿಲ್ಲ ಪ್ರಾಣ ಸಂಕಟ ಸುರುವಾಯ್ತು. ಸ್ಕೂಲ್ ಫೀಜು, ಪುಸ್ತಕ, ಬಟ್ಟೆ ಬರೆ, ಊಟ ತಿಂಡಿ, ಅಬ್ಬಬ್ಬಾ ಒಂದೇ, ಎರಡೇ, ಅವ್ನಪ್ಪ ಏನೂ ಅರಿಯದ ಮುಗ್ದ. ಕಣ್ಣುಬಾಯಿ ಬಿಟ್ಕೊಂಡು ಹಳ್ಳಿ ಯಾವುದು? ಪಟ್ಣ ಯಾವುದು ಅಂತಾ ಗೊತ್ತಿಲ್ದೆ ಗರಬಡಿದವನಂತೆ ತಲೆಯ ಮೇಲೆ ಕೈಯಾನಿಸಿಕೊಂಡು ಆಕಾಶ ನೋಡುತ್ತಾ ಕುಳಿತಿದ್ದ. ಅವ್ನಿಗೆ ಗೊತ್ತಿದ್ದು ಕಲ್ಲು ಗಣಿಯಲ್ಲಿ ಕೆಲ್ಸ ಮಾಡೋದು, ತಿನ್ನೋದು, ಮಲಗೋದು ಅದ್ನ್ ಬಿಟ್ರೆ ಪರಪಂಚ ಗ್ಯಾನವೇ ಇಲ್ಲದ ಮಂಕು ಸಾಂಬ್ರಾಣಿಯಂತಿದ್ದ.

ಇತ್ತ ‘ಅದು’ ಕಾಲೇಜಿಗೆ ಸೇರಲು ದುಡ್ಡು ಇಲ್ದೆ ಪಡಿಪಾಟಲು ಪಡುತ್ತಿರುವ, ತನ್ನ ದೈನೇಸಿ ಸ್ಥಿತಿ ಹೇಗೊ... ತಮ್ಮಯ್ಯ ಮತ್ತು ಮಾಸ್ತರ ಕಿವಿಗೂ ಬಿತ್ತು. ಆಗ ಅವರು ನೊಂದುಕೊಂಡು ತನ್ನ ಕೈಲಾದ ಸಹಾಯ ಮಾಡಲು ಮುಂದಾದರು. ಅಲ್ಲಿ ಇಲ್ಲಿ, ಅವ್ರತ್ರ ಇವ್ರತ್ರ, ಸ್ವಲ್ಪ ಹಣ ಸಂಗ್ರಹಿಸಿದರು. ಅದರ ಜೊತೆಗೆ ತಮ್ಮ ಪಾಲಿನ ಹಣವನ್ನೂ ಸೇರಿಸಿ ಕೊಟ್ಟರು. ಇದರಿಂದ ‘ಅದ’ಕೆ ವರ್ಷದ ಕೂಳಿನ ಜೊತೆಗೆ ಫೀಜು, ಪುಸ್ತಕ, ಬಟ್ಟೆ ಬರೆಗೆ ಕುಂದುಂಟಾಗಲಿಲ್ಲ. ಮುಂದೆಯೂ ಸಹ ‘ಅದ’ಕೆ ಅದೃಷ್ಟ ಕುಲಾಯಿಸಿ, ಒಬ್ಬರಿಂದ, ಇಬ್ಬರಾಗಿ, ಮೂವರಾಗಿ ಅನೇಕ ಕೈಗಳು ಸೇರಿ ‘ಅದ’ಕೆ ಬಂದಿದ್ದ ಕಷ್ಟ ನಿವಾರಣೆಯಾಗಿ, ಮುಂದೆ ಓದುವವರೆಗೂ ನಿರ್ವಿಘ್ನವಾಗದಂತೆ ಕೈಗಳ ಆಸರೆ ಸಿಕ್ಕಿತು.

ಸದ್ಯಕ್ಕೆ ಸಂಕಷ್ಟ ಪರಿಹಾರವಾಯಿತು. ಆದರೆ ‘ಅದ’ಕೆ ಒಂದೇ ಗುರಿ–ಒಂದೇ ದಾರಿ ಒಂದೇ ಛಲ. ಓದುವ ಹುಚ್ಚು, ಗುರಿ ಮುಟ್ಟುವ ತವಕ, ಓದಿ ಮುಮದೆ ಕೆಲ್ಸ ಹಿಡಿದು ನಾಲ್ಕಾರು ಜನಕ್ಕೆ ಸಾಯ ಮಾಡ್ಬೇಕು ಎಂಬುದೇ ಅದಕ್ಕಿದ್ದ ಒಂದೇ ಹಟ. ‘ಅದ’ರ ಹಟಕ್ಕೆಂಬಂತೆ ಅವರಿವರು ಸಹಾಯ ಹಸ್ತ ನೀಡಿದರು. ‘ಅದು’ ಓದಿನ ಕಡೆ ಗಮನಹರಿಯುವಂತೆ ಮಾಡಿದ್ದರು.

*   *   *

ಕೆಂಚನಿಗೆ ಕಲ್ಲುಗಣಿಯ ಹತ್ತಿರವಿದ್ದ ಜೋಪಡಿಯಲ್ಲಿ ವಾಸವಾಗಿದ್ದದ್ದು ಸಾಕಾಗಿತ್ತು. ಇಬ್ಬರ ದುಡಿಮೆಯಲ್ಲಿ ಹೊಟ್ಟೆ ಬಟ್ಟೆ ಕಳ್ದು ಮಿಕ್ಕಿದ್ದನ್ನ ಕುಡಿಕೆಯೊಳಗೆ ಜೋಪಾನ ಮಾಡಿದ್ದರು. ಕಾಸಿಗೆ ಕಾಸು ಸೇರಿಸಿ ಕೈಯಲ್ಲಿ ದುಡ್ಡು ಓಡಾಡುವಂತಾಯ್ತು. ‘ಅದ’ರ ಓದಿಗೆ ಬೇರೆಯವರ ಸಹಾಯ ಸಿಕ್ಕಿದ್ದರಿಂದ ಅದರ ಓದಿನ ಖರ್ಚಿನ ಬಾಬ್ತು ಇರಲಿಲ್ಲ. ನಿರುಮ್ಮಳವಾಗಿ, ತನ್ನ ಪಾಡಿನ ಬಗ್ಗೆ ಚಿಂತಿಸತೊಡಗಿದರು. ಗಾಳಿ, ಚಳಿ, ಮಳೆಗೆ ಆ ಜೋಪಡಿಯಲ್ಲೇ ಇದ್ದು ಇದ್ದು ಸಾಕಾಗಿ, ಜೀವಕ್ಕೆ ನೆಮ್ಮದಿ ಇಲ್ಲದಂತಾಗಿತ್ತು.